

# ರಚಿತಾ ಮೊಳಗಿಸಿದ ಕ್ರಾಂತಿ ಕಹಳೆ!

**ರಚಿತಾ ರಾಮ್ 'ಕ್ರಾಂತಿ' ಸಿನಿಮಾದ ಮೂಲಕ ದರ್ಶನ್ ಜೊತೆಗೆ ಮತ್ತೆ ತೆರೆಯನ್ನು ಹಂಚಿಕೊಳ್ಳುತ್ತಿದ್ದಾರೆ. ಸಾಲು ಸಾಲು ಸಿನಿಮಾಗಳನ್ನು ಒಪ್ಪಿಕೊಂಡಿರುವ ಅವರ ವೃತ್ತಿಬದುಕಿನಲ್ಲಿಯೂ ಕ್ರಾಂತಿಯ ಲಕ್ಷಣಗಳು ಗೋಚರಿಸುತ್ತಿವೆ.**

**■ ಪದ್ಮನಾಭ ಭಟ್**

ತಮ್ಮ ಸಿನಿಮಾಪಯಣದ ಮೊದಲ ಹೆಜ್ಜೆಯಲ್ಲಿಯೇ ದರ್ಶನ್ ಅವರಿಂದ 'ಬುಲ್ ಬುಲ್' ಎಂದು ಛೇಡಿಸಿಕೊಂಡಿದ್ದ ರಚಿತಾ ರಾಮ್ ಮತ್ತೆ ಚಾಲೆಂಜಿಂಗ್ ಸ್ಟಾರ್ ಜೊತೆಗೆ ಸೇರಿಕೊಂಡು 'ಕ್ರಾಂತಿ' ಮಾಡಲು ಹೊರಟಿದ್ದಾರೆ. ಇತ್ತೀಚೆಗೆ ದರ್ಶನ್ ನಟನೆಯ, ಹರಿಕೃಷ್ಣ ನಿರ್ದೇಶನದ 'ಕ್ರಾಂತಿ' ಸಿನಿಮಾ ಮುಹೂರ್ತ ಕಾರ್ಯಕ್ರಮದಲ್ಲಿ ಪಾಲ್ಗೊಂಡಿದ್ದ ಅವರ ಮುಖದಲ್ಲಿ ಉತ್ಸಾಹವಿತ್ತು.

ರಚಿತಾ ರಾಮ್ ಸದ್ಯಕ್ಕಂತೂ ಕನ್ನಡದ ಅತ್ಯಂತ ಬ್ಯುಸಿ ನಟಿ. ಹದಿನೈದಕ್ಕೂ ಹೆಚ್ಚು ಸಿನಿಮಾಗಳು ಅವರ ಕೈಯಲ್ಲಿವೆ. ಅವುಗಳಲ್ಲಿ ಬಹುತೇಕ ಹೊಸಬರು ಮತ್ತು ಪ್ರಯೋಗಶೀಲರ ತಂಡ ಮಾಡುತ್ತಿರುವ ಸಿನಿಮಾಗಳೇ ಹೆಚ್ಚಿವೆ ಎನ್ನುವುದು ಕುತೂಹಲಕಾರಿ ಸಂಗತಿ.

'ನಾನು ಮೊದಲೆಲ್ಲ ಮಾಡ್ಕೊಂಡು ಬಂದಿರುವ ದೊಡ್ಡ ದೊಡ್ಡ ಸಿನಿಮಾಗಳಲ್ಲೆಲ್ಲ ಸುಲಭವಾಗಿ ನಟಿಸಿಬಿಟ್ಟೆ. ಅದೇ 'ಆಯುಷ್ಮಾನ್ ಭವ', 'ಪುಷ್ಪಕ ವಿಮಾನ'ದಂಥ ಸಿನಿಮಾಗಳನ್ನು ಸಾಕಷ್ಟು ಶ್ರಮವಹಿಸಿ ಮಾಡಿದೆ. ನನಗೆ ಸ್ಟಾರ್ ಸಿನಿಮಾಗಳಲ್ಲಿ ಮಾತ್ರ ನಟಿಸುವ ನಟಿ ಎಂದು ಬ್ರ್ಯಾಂಡ್ ಬಿದ್ದುಬಿಟ್ಟಿತ್ತು. ನನಗೆ ಅಂಥ ಅವಕಾಶಗಳೇ ಬಂದರೆ ಏನು ಮಾಡುವುದು? ಯಾವ ನಟಿಯಾದರೂ ಅಂಥ ಅವಕಾಶಗಳನ್ನು ಬಿಟ್ಟುಕೊಳ್ಳಲು ಸಾಧ್ಯವೇ? ಹಾಗಿದ್ದೂ ನಾನು ಯಾವ ಸಿನಿಮಾದಲ್ಲಿಯೂ ಹೀಗೆ ಬಂದು ಹಾಗೆ ಹೋಗುವ ಪಾತ್ರಗಳಲ್ಲಿ ನಟಿಸಲಿಲ್ಲ. ಈಗ ಆ ಇಮೇಜ್ ಅನ್ನು ಮುರಿಯುವಂಥ ಅವಕಾಶಗಳು ಬರುತ್ತಿವೆ. ಲಾಕ್‌ಡೌನ್ ಸಮಯದಲ್ಲಿ ಒಳ್ಳೆಯ ಸ್ಕ್ರಿಪ್ಟ್ ಬಂದಿವೆ. ಕಂಟೆಂಟ್ ಪ್ರಧಾನ ಸಿನಿಮಾಗಳೇ ಜಾಸ್ತಿ ಬರ್ತಿವೆ. ನನಗೂ ಅಂಥ ಪಾತ್ರಗಳನ್ನೇ ಮಾಡಬೇಕು ಎಂಬ ಆಸೆ' ಎನ್ನುತ್ತಾರೆ ರಚಿತಾ. ಅವರೊಳಗೆ ಪ್ರಯೋಗಶೀಲತೆಗೆ ಒಡ್ಡಿಕೊಳ್ಳುವ ಹಂಬಲ ಬರುವುದಕ್ಕೂ, ಅಂಥದ್ದೇ ಸಿನಿಮಾಗಳ ಅವಕಾಶಗಳೂ ಬರುತ್ತಿರುವುದಕ್ಕೂ ಸರಿಸರಿಯಾಗಿದೆ.

ತಾವೀಗ ಇಷ್ಟೆಲ್ಲ ಸಿನಿಮಾಗಳನ್ನು ಒಪ್ಪಿಕೊಂಡಿದ್ದು ಚಿತ್ರರಂಗದಲ್ಲಿ ನಂಬರ್ ಒನ್ ಆಗಬೇಕು ಎಂಬ ಹಂಬಲದಿಂದ ಅಲ್ಲವೇ ಅಲ್ಲ ಎಂದೂ ಅವರು ಸ್ಪಷ್ಟವಾಗಿ ಹೇಳುತ್ತಾರೆ.

'ಎಲ್ಲರಿಗಿಂತ ಜಾಸ್ತಿ ಸಿನಿಮಾ ಮಾಡಬೇಕು ಎಂದು ನಾನು ಯಾವತ್ತಿಗೂ ಅಂದುಕೊಂಡವಳಲ್ಲ. ನನಗೆ ಡೇಟ್ಸ್ ಕೊಡುವುದೇ ಕಷ್ಟವಿದೆ. ಆದರೆ ಈ ಎಲ್ಲ ಕಥೆಗಳು ಎಷ್ಟು ಚೆನ್ನಾಗಿವೆ ಎಂದರೆ ಅವುಗಳಲ್ಲಿ ಯಾವುದನ್ನೂ ಬಿಟ್ಟುಕೊಡುವುದು ಸಾಧ್ಯವೇ ಇಲ್ಲ. ಅಲ್ಲದೆ ಒಬ್ಬ ಸಿನಿಮಾಕರ್ತ ನನಗಾಗಿಯೇ ಒಂದು ಕಥೆಯನ್ನು ಮಾಡಿಕೊಂಡು ಬಂದಾಗ, ಅದು